

# ಪ್ರಶ್ನೆ

■ ನರಸಿಂಹಾರೆಡ್ಡಿ ಯಂಕಮೊಳ

ಕುಂತಲ ದೇಶದ ಮಹಾರಾಜ ಚಂದ್ರಸೇನರ ಆಸ್ಥಾನಕ್ಕೆ ಪಕ್ಕರಾಜ್ಯದ ವಿಷ್ಣುಶರ್ಮನೆಂಬ ಪಂಡಿತನೊಬ್ಬನು ಭೇಟಿಕೊಟ್ಟನು. ನಿಮ್ಮ ಆಸ್ಥಾನದಲ್ಲಿ ಬ್ರಹ್ಮದತ್ತನೆಂಬ ಚಿತ್ರಕಲಾವಿದನು ಅಪಾರ ಜ್ಞಾನಿಯೂ, ಬುದ್ದಿವಂತನೆಂದು ಕೇಳಿದ್ದೇನೆ. ಅವರ ಜ್ಞಾನವನ್ನು ಪರೀಕ್ಷಿಸಲು ನಾನು ಬಂದಿದ್ದೇನೆ, ದಯಮಾಡಿ ನಮ್ಮಿಬ್ಬರ ನಡುವೆ ಸ್ಪರ್ಧೆಯನ್ನು ಆಯೋಜಿಸಲು ಅನುಮತಿ ಕೊಡಿ ಮಹಾರಾಜರೇ ಎಂದು ಮನವಿ ಮಾಡಿದನು. ಬ್ರಹ್ಮದತ್ತನತ್ತ ನೋಡಿದರು ಮಹಾರಾಜರು. ಅವರ ನೋಟವನ್ನೇ ಆಜ್ಞೆ ಎಂಬಂತೆ ಬ್ರಹ್ಮದತ್ತನು ಎದ್ದುನಿಂತು ಸ್ಪರ್ಧೆಗೆ ನಾನು ಸಿದ್ದ ಮಹಾರಾಜರೇ ಎಂದು ಹೇಳಿದನು. ಆಗಲಿ ನಾಳೆಯೇ ನಿಮ್ಮಿಬ್ಬರ ನಡುವೆ ಸ್ಫರ್ಧೆಯನ್ನು ಏರ್ಪಡಿಸುವೆವು, ಅಲ್ಲಿಯವರೆಗೆ ನೀವು ನಮ್ಮ ಅತಿಥಿ ಗೃಹದಲ್ಲಿ ಸಕಲ ರಾಜ ಮರ್ಯಾದೆಯೊಂದಿಗೆ ಇರಿ ಎಂದು ಹೇಳಿದರು.

ವಿಷ್ಣುಶರ್ಮನು ಅತಿಥಿಗೃಹಕ್ಕೆ ಹೋದನು. ಮಹಾರಾಜರು ಬ್ರಹ್ಮದತ್ತನಿಗೆ ಇದು ನಮ್ಮ ರಾಜ್ಯದ ಮರ್ಯಾದೆಗೆ ಸಂಬಂಧಿಸಿದ ಪ್ರಶ್ನೆ ನಾಳೆಯ ಸ್ಪರ್ಧೆಯು ಏನೇ ಆಗಿರಲಿ ಗೆಲುವು ಮಾತ್ರ ನಮ್ಮದಾಗಿರಲಿ ಎಂದು ಆಜ್ಞೆಯಿತ್ತರು. ಖಂಡಿತ ಮಹಾರಾಜ ನನ್ನ ಮೇಲೆ ನಂಬಿಕೆಯಿಡಿ ಎಂದುಹೇಳಿ ಬ್ರಹ್ಮದತ್ತ ಅಲ್ಲಿಂದ ಹೊರನಡೆದ. ತಾನು ತನ್ನ ವಸತಿಗೃಹಕ್ಕೆ ಹೋಗುವ ದಾರಿಯಲ್ಲಿ ವಿಷ್ಣುಶರ್ಮನು ತಂಗಿದ್ದ ಅತಿಥಿಗೃಹವು ಬರುತಿತ್ತು, ಅಲ್ಲಿಂದ ಹಾದುಹೋಗುವಾಗ ಆ ಕೋಣೆಯಲ್ಲಿ ಏನೋ ಖಡ್ಗದ ಶಬ್ದ ಬಂದಂತೆ ಆಯಿತು ಕಿಟಕಿಯಿಂದ ಕಣ್ಣುಹಾಯಿಸಿ ನೋಡಿ ಹೊರಟುಹೋದ. ಮರುದಿನ ಬೆಳಗ್ಗೆ ಎಂದಿನಂತೆ ರಾಜಸಭೆ ಸೇರಿತು. ತುಂಬುಗಾಂಭೀರ್ಯದಿಂದ ವಿಷ್ಣುಶರ್ಮನು ಕುಳಿತಿದ್ದ, ನಗುಮೊಗದಿಂದ ಬ್ರಹ್ಮದತ್ತನು ಅವನೆದುರಿಗೆ ಕುಳಿತಿದ್ದ. ಸ್ಪರ್ಧೆ ಆರಂಭಿಸಿ ಎಂದು ಮಹಾರಾಜರು ಆಜ್ಞೆಯಿತ್ತರು.

ಸ್ಪರ್ಧೆ ಆರಂಭಕ್ಕೂ ಮೊದಲು ಒಂದು ಷರತ್ತು ಮಹಾರಾಜ, ಈ ಸ್ಪರ್ಧೆಯಲ್ಲಿ ನಾನು ಗೆದ್ದರೆ ಒಂದುದಿನದ ಮಟ್ಟಿಗೆ ಯಾವುದೇ ನಿರ್ಬಂಧವಿಲ್ಲದೇ ನಿಮ್ಮ ಅರಮನೆಯನ್ನು ನಾನೊಬ್ಬನೇ ಸುತ್ತಿ ನೋಡುವ ಅವಕಾಶವನ್ನು ಮಾಡಿಕೊಡಬೇಕು. ಒಂದು ವೇಳೆ ಸೋತರೆ ನೀವು ಹೇಳಿದ ಹಾಗೆ ನಾನು ನಡೆದುಕೊಳ್ಳುತ್ತೇನೆ ಎಂದ.

ಇದೇನಿದು ವಿಚಿತ್ರ ಷರತ್ತು, ನಮ್ಮ ಅರಮನೆಯಲ್ಲಿ ಅಂತಹ ವಿಶೇಷವೇನಿದೆ ನೀವು ನೋಡಲು ಎಂದರು ಮಹಾರಾಜರು. ನಿಮ್ಮ ಅರಮನೆಯೇ ಭವ್ಯ ಶಿಲ್ಪಕಲೆಗೆ, ಚಿತ್ರಕಲಾಕೃತಿಗಳಿಗೆ ಪ್ರಸಿದ್ಧಿಯಾಗಿದೆ ಮಹಾರಾಜರೇ ಅವುಗಳೆಲ್ಲಾ ಅರಮನೆಯ ಮೂಲೆ ಮೂಲೆಯಲ್ಲಿವೆ, ಅವುಗಳನ್ನೆಲ್ಲಾ ನಾನು ನೋಡಬೇಕು. ನನ್ನ ಜೊತೆ ಯಾರಿದ್ದರೂ ಆ ಕಲೆಯನ್ನು ಅರಿಯಲು ನನಗೆ ತೊಂದರೆಯಾಗುತ್ತದೆ ಎಂದ. ಮಹಾರಾಜರು ಆಗಲಿ ಎಂದು ಅಪ್ಪಣೆಯಿತ್ತರು.

ಬ್ರಹ್ಮದತ್ತನಕಡೆಗೆ ನೋಡಿದ ವಿಷ್ಣುಶರ್ಮನು, ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ ಆ ಪ್ರಶ್ನೆಗೆ ಸಾಕ್ಷಿ ಸಮೇತವಾಗಿ ಉತ್ತರಿಸಿದರೆ ನೀನು ಬುದ್ಧಿವಂತನೆಂದು ಒಪ್ಪಿಕೊಳ್ಳುತ್ತೇನೆ. ನೀನು ಚಿತ್ರಕಲಾವಿದನಲ್ಲವೇ, ಅದರ ಮೇಲೆಯೇ ಒಂದು ಪ್ರಶ್ನೆ ಕೇಳು ಎಂದು.

‘ಕುಂಚದಿಂದ ಬಿಡಿಸದ
ವರ್ಣರಂಜಿತವಾದ
ನಮ್ಮ ಕೈಗಳಿಗೆ ಸಿಗದ
ಕಂಡು ಮರೆಯಾಗುವ
ಒಂದು ಚಿತ್ರಕಲೆಯನ್ನು ತೋರಿಸು’ ಎಂದ.

ಸಭೆಗೆ ಸಭೆಯೇ ಮೌನತಾಳಿತು. ಏನು ಇಂತಹ ಪ್ರಶ್ನೆ ಒಂದಕ್ಕೊಂದು ಸಂಬಂಧವಿಲ್ಲದ ಸಾಲುಗಳು, ಇದಕ್ಕೆ ಉತ್ತರವೇ ಇಲ್ಲವೆಂದು ಮಾತನಾಡಿಕೊಳ್ಳಹತ್ತಿದರು.

ಬ್ರಹ್ಮದತ್ತನೂ ಮೌನವಾದ. ನನಗೆ ಒಂದು ದಿನ ಸಮಯಕೊಡಿ ಎಂದು ಹೇಳಿದ. ತೆಗೆದುಕೊ, ನಾಳೆಯ ಮಧ್ಯಾಹ್ನದತನಕ ನಿನಗೆ ಸಮಯವಿದೆ ಎಂದು ವಿಷ್ಣುಶರ್ಮ ಹೇಳಿದ. ನಾಳೆ ನಾನು ಹೇಳಿದ ಸಮಯಕ್ಕೆ ಉತ್ತರ ಸಿಗದಿದ್ದರೆ, ನಾನು ಸೋತಿದ್ದೇನೆ ಎಂದು ನಿರ್ಧರಿಸಿ ಎಂದುಹೇಳಿ ಬ್ರಹ್ಮದತ್ತ ಹೊರಟುಹೋದ. ಮರುದಿನ ರಾಜಸಭೆಯಲ್ಲಿ ಬ್ರಹ್ಮದತ್ತನ ಸುಳಿವೇ ಇಲ್ಲ, ಮಹಾರಾಜರೂ ಗಾಬರಿಯಾದರು. ಮಧ್ಯಾಹ್ನವಾಗುತ್ತಾ ಬಂತು ಇನ್ನೂ ಬರಲೇ ಇಲ್ಲ. ಇನ್ನೂ ಕೆಲಸಮಯ ಇರುವಾಗಲೇ ಅವಧಿ ಮುಗಿಯಿತು, ಬ್ರಹ್ಮದತ್ತನು ಸೋತುಹೋದ, ನನಗೆ ಕೊಟ್ಟಮಾತಿನ ಪ್ರಕಾರ ಅರಮನೆ ನೋಡಲು ಅನುಮತಿ ಕೊಡಿ